ಬರುವವರೇ ನಿಜವಾದ ಅತಿಥಿಗಳು' ಎನ್ನುವ ಸಿದ್ಧೇಶ್ವರ ಸ್ವಾಮೀಜಿ ಅವರ ಮಾತಿನಂತೆ ಗೋಪಾಲಯ್ಯನ ಪಾತ್ರ ಕಾದಂಬರಿಯಲ್ಲಿ ಮಾತನಾಡಿದ ರೀತಿ ನಿಜಕ್ಕೂ ಕಲಿಯಬೇಕಾದ, ರೂಢಿಸಿಕೊಳ್ಳಬೇಕಾದ ಬದುಕಿನ ಪಾಠವೆಂಬಂತೆ ಕಾಣುತ್ತಿದೆ. ಲಂಕೇಶ್ ಅವರು ಹೇಳಿದಂತೆ ಮನುಷ್ಯರಾಗಿ ಬಾಳಬೇಕು, ಮನುಷ್ಯರಂತೆ ವರ್ತಿಸಬೇಕು ಎಂಬುದನ್ನು ಪದೇ ಪದೇ ನೆನಪಿಸುವಂತೆ ಗೋಪಾಲಯ್ಯನವರ ಪಾತ್ರ ಕಾದಂಬರಿಯಲ್ಲಿ ನಿರೂಪಿತವಾಗಿದೆ.

ಎಷ್ಟೇ ಶ್ರೀಮಂತರಾದರೂ ಒಂದು ಚಿಕ್ಕ ಆಡಂಬರವೂ ಇಲ್ಲದೇ ಸರಳವಾಗಿ ಬದುಕಿದ, ಸಹಜವಾಗಿ ಎಲ್ಲರ ಜೊತೆಗೆ ಒಂದೇ ರೀತಿಯಾಗಿ ನಡೆದುಕೊಂಡ ಬಗೆಯಿಂದಾಗಿ ಗೋಪಾಲಯ್ಯ ಅವರ ಪಾತ್ರದೊಂದಿಗಿನ ನನ್ನ ಪಯಣ ಇನ್ನೂ ಮುಗಿದಿಲ್ಲ. 'ಸರಳವಾಗಿ ಬದುಕು, ಉದಾತ್ತವಾಗಿರುವದನ್ನು ಆಲೋಚಿಸು' ಎನ್ನುವ ತತ್ವವನ್ನು ಗೋಪಾಲಯ್ಯನವರು ಓದುಗರಿಗೆ ಅರ್ಥಮಾಡಿಸುತ್ತಾರೆ. ಹಾಗೂ ಜೀವನದ ಅಂತರಂಗ ಮತ್ತು ಬಹಿರಂಗದ ದರ್ಶನವನ್ನು ಸಹ ಮಾಡಿಸಬಲ್ಲರು.

ಈ ಇಳಿ ವಯಸ್ಸಿನಲ್ಲಿಯೂ ಬೆಟ್ಟ ಕಡಿದು ಇನ್ನೊಂದು ತೋಟ ಮಾಡಿಯೇನು ಎನ್ನುವ ಛಲಗಾರರು ಅವರು. ಮನೆಬಿಟ್ಟು ಹೋದ ಮಗನನ್ನು ನೆನಪಿಸಿಕೊಂಡು ದುಃಖಿಸುವ ಹೆಂಡತಿಯನ್ನು ಸಮಾಧಾನ ಮಾಡಲೋಸುಗ ತಮ್ಮ ಅಂತರಂಗದ ನೋವು ಹೊರಗೆ ತೋರದಂತೆ ಬಿಗುವಿನಿಂದ ಇರುವರು. ನೋವಿನ ಕ್ಷಣಗಳು ಸಾಧ್ಯವಾದಷ್ಟು ಮಟ್ಟಿಗೆ ಪತ್ನಿಯನ್ನು ತಲುಪದಂತೆ ಕಾವಲಾಗಿರುವರು. ಪತ್ನಿ ಶಂಕರಿ ಮಗನ ನೆನಪಿನಲ್ಲಿ ದುಃಖಿಸುವ ಕ್ಷಣ ಬರುವುದೆಂದು ಗೊತ್ತಾದಾಗ ಆಕೆಗೊಂದು ಕೆಲಸ ಹೇಳಿ ಮನಸ್ಸು ಅದರಲ್ಲಿ ತೊಡಗಿಕೊಂಡಿರುವಂತೆ ಮಾಡುವರು. ಹೌದು. ಮನುಷ್ಯರು ಎಲ್ಲವನ್ನು ಎದುರಿಸಿ ಬದುಕಬಲ್ಲರು. ಆದರೆ, ಕರುಳಿನ ಕುಡಿಯ ವಿಷಯ ಅಂತ ಬಂದಾಗ ಒಂದು ಕ್ಷಣ ಪಿತೃ ವಾತ್ಸಲ್ಯದ ಸೆಳವಿಗೆ ಅವರೂ ಸಿಲುಕಿಕೊಳ್ಳುತ್ತಾರೆ. ಉದಾ: ಕಾದಂಬರಿಯಲ್ಲಿ ಬರುವ ಶಿವರಾಮಯ್ಯ, 'ನಾನು ಪುಣೆಯಲ್ಲಿ ಕಂಡದ್ದು ನಿಮ್ಮ ಮಗನನ್ನೆ' ಎಂದಾಗ, ಆ ಕ್ಷಣಕ್ಕೆ ಗೋಪಾಲಯ್ಯ ಮಗನನ್ನು ನೋಡಲೆಂದು ಹೊರಡಲು



ಸಜ್ಜಾಗಿಯೇ ಬಿಡುತ್ತಾರೆ. ಎಷ್ಟೇ ಶಕ್ತಿಶಾಲಿ, ಸತ್ವಶಾಲಿ ಮನಸ್ಸು ಅನ್ನಿಸಿದರೂ ಅಂತರಂಗದಲ್ಲಿ ನಮಗೆ ನಮ್ಮದೇ ಅದ ಕೆಲವೊಂದು ದೌರ್ಬಲ್ಯಗಳಿರುತ್ತವೆ. ನಾವು ಎಷ್ಟು ಸಲ ಪ್ರಯತ್ನಪಟ್ಟರೂ ನಮ್ಮ ಖಾಸಗಿ ಜೀವನದ ಅಂತರಂಗದ ಧ್ವನಿ ನಮ್ಮನ್ನು ಕೆಲವೊಮ್ಮೆ ಅಸಹಾಯಕರನ್ನಾಗಿ ಮಾಡಿಬಿಡುತ್ತದೆ. ಹಾಗೆ ಪ್ರತಿಯೊಬ್ಬ ಮನುಷ್ಯ ನೋಡಲು ತುಂಬಾ ಗಟ್ಟಿ ಮನಸ್ಸಿನವನು ಅನ್ನಿಸಿದರೂ ಎಲ್ಲರಿಗೂ ಅಂತರಂಗದ ಮೂಲೆಯಲ್ಲಿ ಅವರ ಅರಿವಿಗೇ ಬಾರದ ದೌರ್ಬಲ್ಯದ ತುಣುಕೊಂದು ಜಾಗ ಪಡೆದಿರುತ್ತದೆ. ಹಾಗೆ ಗೋಪಾಲಯ್ಯನ ಪಾತ್ರವೂ. ಈ ಪಾತ್ರ ನನ್ನೊಂದಿಗೆ ದೈನಿಕ ಬದುಕಿನ ಬಹುದೊಡ್ಡ ಮೀಮಾಂಸೆಯಾಗಿ ಕಾಣಿಸಿದೆ.

ಗೋಪಾಲಯ್ಯನ ಪಾತ್ರವು ನನ್ನನ್ನು ಆಂತರಿಕವಾಗಿ ಕಾಡಿದಷ್ಟೇ ಭೌತಿಕವಾಗಿಯೂ ಕಾಡಿದೆ. ಯಾಕೆಂದರೆ ಅವರ ವ್ಯಕ್ತಿತ್ವದ ಚಹರೆಯೇ ವಿಭಿನ್ನವಾದುದು. ಮಲೆನಾಡಿನ ಪರಿಸರದ ಚಳಿಯಲ್ಲಿ ಕಾಡಿನ ವಾತಾವರಣದಲ್ಲಿ ಜ್ವರಕ್ಕೆ ಅಂಜದೇ ಹುಲಿ, ಕಾಟಿ,